# ನಿನ್ನ ದೇಹ ಅಥವಾ ದೂರದ ದೇಶ

ನಕ್ಷೆಗಳು ದುರ್ಬಲವಾದ ಕದನ ವಿರಾಮದಂತೆ
ಚದುರಿದ ಪರಮಾಣುಗಳಿಂದ ಮಾಡಲ್ಪಟ್ಟಿವೆ
ನಿನ್ನ ಗಡಿಗಳನ್ನು ತಲುಪಲು
ನಿನ್ನ ಚರ್ಮವನ್ನು ಸ್ಪರ್ಶಿಸಲು
ನಾನು ಕಂಡುಕೊಳ್ಳಲೇಬೇಕು
ಉರಿವ ಸಿರಿ ಭೂವಲಯಗಳ
ಮತ್ತೆ ಮನಬಂದಂತೆ ಮೂಡಿದ
ಒಳದಾರಿಗಳ

ಲಂಗುಲಗಾಮಿಲ್ಲದ
ಕಚ್ಚೆ ಹರುಕ ದಿಕ್ಸೂಚಿಯು
ನನ್ನನ್ನು ಹೊರದಬ್ಬುತ್ತದೆ
ಪ್ರೀತಿಯ ಯುದ್ಧದ ಪಟ್ಟಾಭಿಷೇಕ ಮಾಡಿ
ಕೇಂದ್ರಕ್ಕೆ

ಚಂಡಮಾರುತ ಹಾಗೂ ಪರಿಶುದ್ಧ ನಿರಾಳತೆಯ ನಡುವೆ
ನನ್ನನ್ನೇ ನಾನು ಕಳೆದುಕೊಳ್ಳಲು ಆಗಮಿಸುವೆ
ಬಯಕೆಯ ಪುರಾತನ ಬೆನ್ನಹುರಿ
ಈಗಲೂ ಕಬಳಿಸುತ್ತಿದೆ ಎದೆಯ ನಾಡಿ ಮಿಡಿತಗಳ

ನಿನ್ನ ದೇಹವೊಂದು ದೂರದ ದೇಶ
ಹೃದಯವೇ ಗುರಿ
ಅದಕ್ಕೆ ಹೃದಯವೇ ಬಾಣ

# ನಿಗೂಢ ಕಣ್ಣುಗಳು

ನಿಗೂಢ ಕಣ್ಣುಗಳು
ತಲೆ ಮರೆಸಿಕೊಂಡಿವೆ
ಉಕ್ಕಿನ ನಾಗಾಲೋಟದ ನಗರಗಳಲ್ಲಿ


ಅವುಗಳ ಹಿಂದೆ
ಮತ್ತೆ
ಸಾವಿರ ಸಾವಿರ
ನಿದ್ದೆ–ನಡಿಗೆಯ ಕಣ್ಣುಗಳು

ಅಸಹಾಯಕತೆಯನ್ನೂ ಹೆಳವಾಗಿಸುವ
ಅದಮ್ಯ ನಶೆ
ಖರಪುಟದ ಸದ್ದು

ಚೀತ್ಕಾರಗಳನ್ನು ತಣಿಸಿ
ಮುದ್ದು ಮಾಡುತಾ ಎಲ್ಲವನೂ

ಯಾವಾಗ ಅವು
ಹೊರತಲದ ಮೇಲೆ ತೇಲುವವೋ
ಆಗಲೇ ದಾಳಿಮಾಡಿ
ನಿನ್ನ ಹೊತ್ತೊಯ್ಯುವವು

ನಿನಗೆ ಗೊತ್ತಾ
ಆ ಕಣ್ಣುಗಳ
ಅವ್ಯಕ್ತಕೆ ನೀನು ಕೊಟ್ಟ ಆಹ್ವಾನ
ನಿನ್ನ ಸಾವು!



ಕಲೆ: ಬಸವರಾಜ ಕಲೆಗಾರ